## ಮಂತ್ರಿಗಳೇ ಹೇಗಿದ್ದೀರಿ?

ದೇಶದ ಪ್ರಜೆಯೊಬ್ಬ ಮಂತ್ರಿಯನ್ನು ಕತ್ತೆ ಎಂದು ಕರೆದಿದ್ದ. ಕರೆಸಿಕೊಂಡ ಮಂತ್ರಿಗೆ ಅವಮಾನವಾಗಿ ರಾಜನಿಗೆ ದೂರು ಕೊಟ್ಟ. ವಿಚಾರಣೆಗೆ ಬಂದಾಗ ರಾಜ, 'ನೀನು ಮಂತ್ರಿಗಳನ್ನು ಹಾಗೆ ಕರೆದದ್ದು ತಪ್ಪು. ಅವರ ಕ್ಷಮೆ ಕೇಳು' ಎಂದು ಪ್ರಜೆಗೆ ಹೇಳಿದ. ಆ ವ್ಯಕ್ತಿ ಮಂತ್ರಿಯ ಕ್ಷಮೆ ಕೇಳಿದ ನಂತರ, 'ಮಹಾಸ್ವಾಮಿ, ಮಂತ್ರಿಗಳನ್ನು ಕತ್ತೆ ಎಂದು ಕರೆದದ್ದು ತಪ್ಪು. ಆದರೆ, ಕತ್ತೆಯನ್ನು ಮಂತ್ರಿಗಳೇ ಎಂದು ಸಂಬೋಧಿಸಬಹುದೇ?' ಎಂದು ಕೇಳಿದ. ರಾಜನಿಗೆ ತಲೆಬಿಸಿಯಾಯಿತು. ಆದರೂ ಉತ್ತರಿಸಲೇಬೇಕಲ್ಲ... 'ಕತ್ತೆಯನ್ನು ಮಂತ್ರಿಗಳೇ ಎಂದು ಕರೆಯಬಾರದು ಎಂದು ನಮ್ಮ ದೇಶದ ಕಾನೂನಿನಲ್ಲಿ ಇಲ್ಲ. ನೀನು ಹಾಗೆ ಕರೆಯಬಹುದು' ಎಂದ. ಕೂಡಲೇ ಆ ವ್ಯಕ್ತಿ ಮಂತ್ರಿಯತ್ತ ತಿರುಗಿ, 'ಮಾನ್ಯ ಮಂತ್ರಿಗಳೇ ಹೇಗಿದ್ದೀರಿ?' ಎಂದು ಕೇಳಿದ. ಸಭಾಸದರೆಲ್ಲರೂ ನಗುತ್ತಿದ್ದರೆ ಮಂತ್ರಿ ಹಾಗೂ ರಾಜನ ಮುಖ ಪೆಚ್ಚಾಗಿತ್ತು!

**ಬಿ.ಎಸ್. ರಾಜಲಕ್ಷ್ಮಿ**





## ಯಾಕೆ ಕೂಗಲಿಲ್ಲ

ದಟ್ಟ ಕಾಡಿನಲ್ಲಿ ಬಸು ಒಬ್ಬಂಟಿಯಾಗಿ ಹೊರಟಿದ್ದಾಗ, ದಾರಿಯಲ್ಲಿ ಒಮ್ಮೆಲೇ 'ನಿಲ್ಲು' ಎಂದು ಒಂದು ಧ್ವನಿ ಹೇಳಿತು. ಬಸು ತಕ್ಷಣ ನಿಂತುಬಿಟ್ಟ. ಕ್ಷಣ ಮಾತ್ರದಲ್ಲಿ ಅವನ ಮುಂದೆ ಮರದ ದೊಡ್ಡ ಕೊಂಬೆಯೊಂದು ಮುರಿದು ಬಿತ್ತು. ಅದೃಶ್ಯ ಧ್ವನಿಗೆ ಮನದಲ್ಲಿಯೇ ನಮಿಸಿ ಮುಂದೆ ನಡೆದ. ಒಂದು ಮೈಲು ಹೋಗುವಷ್ಟರಲ್ಲಿ ಮತ್ತೆ 'ನಿಲ್ಲು' ಎಂಬ ಧ್ವನಿ ಕೇಳಿಸಿತು. ತಕ್ಷಣ ನಿಂತ. ಮರದ ಮೇಲಿಂದ ದೊಡ್ಡ ನಾಗರಹಾವೊಂದು ಇವನ ಮುಂದೆಯೇ ಬಿದ್ದು, ಸರಸರನೇ ಕಾಡಿನಲ್ಲಿ ಹರಿದು ಹೋಯಿತು. ಬಸು ನಿಂತಲ್ಲಿಯೇ ಕೈಮುಗಿದು, 'ಯಾರದು ಎರಡು ಬಾರಿ ನನ್ನ ಜೀವ ಉಳಿಸಿದ ಮಹಾತ್ಮ?' ಎಂದು ಕೇಳಿದ. 'ನಾನು ದೇವರು' ಎಂದಿತು ಧ್ವನಿ. 'ಮಹಾತ್ಮ, ನನ್ನ ಮದುವೆ ಸಮಯದಲ್ಲಿ ಯಾಕೆ ಹೀಗೆ ಕೂಗಿ ನನ್ನ ಜೀವನ ಉಳಿಸಲಿಲ್ಲ?' ಎಂದು ಕೇಳಿದ. ಧ್ವನಿ ಶಾಂತವಾಗಿ ಉತ್ತರಿಸಿತು: 'ಆಗಲೂ ನಾನು ಕೂಗಿದೆ. ಆ ಕರಡಿ ಮಜಲಿನ, ಹಲಗೆಯ ಶಬ್ದದಲ್ಲಿ ನಾನು ಕೂಗಿದ್ದು ನಿನಗೆ ಕೇಳಿಸಲಿಲ್ಲ.'

**ಮೋಹನ್ ಆರ್. ದೇಶಪಾಂಡೆ**